**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ**
**ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

ಸೇಶನ ಕೇಸ ನಂಃ 41/2019
ಪಿಡಬ್ಲು : 3 ಸಿಡಬ್ಲು : 7

| | |
|---|---|
| ಸಾಕ್ಷಿಯ ಹೆಸರು | : ಶ್ರೀಮತಿ ಕಸ್ತೂರಿ ಬರಮಪ್ಪ ತಳವಾರ |
| ಗಂಡನ ಹೆಸರು | : ಶ್ರೀ ಬರಮಪ್ಪ ತಳವಾರ |
| ವಯಸ್ಸು | : 60 ವರ್ಷ |
| ಉದ್ಯೋಗ | : ಕೂಲಿ ಕೆಲಸ |
| ವಾಸ್ತವ್ಯ | : ಅಶೋಕ ನಗರ, ಖಾನಾಪೂರ |
| ದಿನಾಂಕ | : 17-04-2023 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. |

**<u>ಮುಖ್ಯ ವಿಚಾರಣೆ</u> : <u>ವಿಶೇಷ ಸರ್ಕಾರಿ ಅಭಿಯೋಜಕರಿಂದ</u>**

ಫ್ರಾಸಾಃ1 ಕಲ್ಲಪ್ಪ ತಳವಾರ ನನ್ನ ಮೈದುನ, ಫ್ರಾಸಾಃ2 ಮಲ್ಲಿಕಾರ್ಜುನ, ಚಾಸಾಃ12 ಸಿದ್ದಪ್ಪ ನನ್ನ ಮಕ್ಕಳು. ಚಾಸಾಃ8 ಸಂತೋಷ, ಚಾಸಾಃ9 ಶಂಕರ ತಳವಾರ ಚಾಸಾಃ10 ಕವಿತಾ ತಳವಾರ, ಚಾಸಾಃ11 ಆಕಾಶ ತಳವಾರ ನನ್ನ ಸಂಬಂಧಿಕರು. ಚಾಸಾಃ13 ಮಂಜುಳಾ ಉಪಾಸಿ ಆರೋಪಿಯ ಹೆಂಡತಿ. ಚಾಸಾಃ14 ಕಾಡಪ್ಪ ಉಪಾಸಿ ಆರೋಪಿಯ ಅಣ್ಣ. ಆರೋಪಿ ಬಾಳೇಶ ಉಪಾಸಿ ನನಗೆ ಗೊತ್ತು.

2. ಐದುವರೆ ವರ್ಷಗಳ ಹಿಂದೆ ನನ್ನ ಮಗ ಬೆಳಿಗ್ಗೆ 08.00 ಗಂಟೆಗೆ ರಂದನಕಾನ ದರ್ಗಾಕ್ಕೆ ಹೋಗಿದ್ದ. ನಾನು ಮನೆಯಲ್ಲಿ ಕೆಲಸ ಮಾಡುತ್ತಿದ್ದೆ. ನನ್ನ ಮಗ ಇನ್ನು ಮನೆಗೆ ಬರದ ಕಾರಣ ನಾನು ರಂದನಕಾನ ದರ್ಗಾದ ಹತ್ತಿರ ಹೋಗುತ್ತಿದ್ದೆ. ಆರೋಪಿ ಬಾಳಪ್ಪ ಉಪಾಸಿ ಮನೆಯ ಮುಂದೆ ಜಗಳ ನಡೆದಿತ್ತು. ಸದರಿ ಜಗಳ ನನ್ನ ಮಗ ಮಲ್ಲಿಕಾರ್ಜುನ ತಳವಾರ ಹಾಗೂ ಆರೋಪಿ ಬಾಳಪ್ಪ ಉದಾಸಿ ಮಧ್ಯದಲ್ಲಿ ನಡೆದಿತ್ತು. ಆರೋಪಿ ಬಾಳಪ್ಪ ಉದಾಸಿ ಕೈಯಲ್ಲಿ ಕೊಯ್ತಾ ಇತ್ತು. ಆರೋಪಿ ಬಾಳಪ್ಪ ಉದಾಸಿ ನನ್ನ ಮಗನ ಕುತ್ತಿಗೆಗೆ ಕೊಯ್ತಾದಿಂದ ಹೊಡೆಯಲು ಹೋದಾಗ ನಾನು ಅದನ್ನು ತಪ್ಪಿಸಲು ನನ್ನ ಬಲಗೈಯನ್ನು ಮುಂದೆ ಮಾಡಿದಾಗ ಸದರಿ ಕೊಯ್ತಾದಿಂದ ಆರೋಪಿ ನನ್ನ ಬಲಗೈ ಬೆರಳುಗಳ ಮೇಲೆ ಹಲ್ಲೆ ಮಾಡಿದ. ಆಗ ನನ್ನ ಬಲಗೈ ಬೆರಳುಗಳಿಗೆ ಗಾಯಗಳಾದವು. ನನ್ನ ಮಗನಿಗೆ ತಲೆಗೆ ಹಾಗೂ ಎರಡೂ ಕೈಗಳಿಗೆ ಗಾಯಗಳಾಗಿದ್ದವು. ಆಗ ಜಗಳವನ್ನು ಚಾಸಾಃ8 ಸಂತೋಷ, ಚಾಸಾಃ11 ಆಕಾಶ, ಚಾಸಾಃ10

ಕವಿತಾ ಬಿಡಿಸಿದರು. ನಂತರ ನನ್ನನ್ನು ನನ್ನ ಮಗನನ್ನು ಖಾನಾಪೂರ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಲಾಯಿತು. ನಂತರ ಹೆಚ್ಚಿನ ಚಿಕಿತ್ಸೆಗಾಗಿ ವೇಣುಗ್ರಾಮ ಆಸ್ಪತ್ರೆ ಬೆಳಗಾವಿಗೆ ಕರೆದುಕೊಂಡು ಬಂದರು. ಆರೋಪಿ ನನ್ನ ಹಾಗೂ ನನ್ನ ಮಗನ ಮೇಲೆ ಹಲ್ಲೆ ಮಾಡಲು ಉಪಯೋಗಿಸಿದ ಕೊಯ್ತಾವನ್ನು ನೋಡಿದರೆ ಗುರುತಿಸುತ್ತೇನೆ. ಸದರಿ ಕೊಯ್ತಾವನ್ನು ನಾನು ಈಗ ನೋಡುತ್ತಿದ್ದು, ಅದನ್ನು ಗುರುತಿಸುತ್ತೇನೆ. ಅದನ್ನು ಈಗಾಗಲೇ ಮು.ಮಾಃ1 ಎಂದು ಗುರುತಿಸಲಾಗಿದೆ. ಘಟನೆಯ ಸಮಯದಲ್ಲಿ ನನ್ನ ಮಗ ಧರಿಸಿದ ಟೀಶರ್ಟನ್ನು ನೋಡಿದರೆ ಗುರುತಿಸುತ್ತೇನೆ. ಸದರಿ ಟೀಶರ್ಟನ್ನು ನಾನು ಈಗ ನೋಡುತ್ತಿದ್ದು, ಅದನ್ನು ಗುರುತಿಸುತ್ತೇನೆ. ಸದರಿ ಟೀಶರ್ಟನ್ನು ಈಗಾಗಲೇ ಮು.ಮಾಃ2 ಎಂದು ಗುರುತಿಸಲಾಗಿದೆ. ಜಗಳ ಬಿಡಿಸಿದ ನಂತರ ಆರೋಪಿ ನಿಮ್ಮನ್ನು ನೋಡಿಕೊಳ್ಳುತ್ತೇನೆ ಎಂದು ಜೀವದ ಧಮಕಿ ಹಾಕಿದ.

**<u>ಪಾಟೀ ಸವಾಲು: ಶ್ರೀ.ಎ.ಬಿ.ಕೆ. ವಕೀಲರಿಂದ ಆರೋಪಿತನ ಪರವಾಗಿ</u>**

ಆರೋಪಿ ಪರ ವಕೀಲರು ಹಾಜರು ಇಲ್ಲದ ಕಾರಣ, ಈ ಸಾಕ್ಷಿಗೆ ಆರೋಪಿ ಪರ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರು ಸವಾಲು ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನ ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಅಶ್ವಿನಿ ವಿಜಯ ಶಿರಿಯಣ್ಣವರ)
3 ನೇ ಹೆಚ್ಚುವರಿ ಸತ್ರ ನ್ಯಾಯಾಧೀಶರು, ಬೆಳಗಾವಿ.